*ಓ:ಎಸ್:ನಂ.234/2015*

*ಡಿ .ಡಬ್ಲ್ಯೂ- 1*

***ದಿಃ 03-03-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.***

***ಪಾಟೀ ಸವಾಲುಃ ವಾದಿ ಪರ ಶ್ರೀ ಜಿ ವಿ ಕೆ ವಕೀಲರಿಂದ***

ದಾವ ಸ್ವತ್ತನ್ನು ವಾದಿ ಖರೀದಿಸಿರುತ್ತಾರೆಂದರೆ ಸರಿ. ಸಾಕ್ಷಿ ಮುಂದುವರಿದು ನಾವು ಸಹ ಖರೀದಿಸಿರುತ್ತೇವೆ ಎಂದು ನುಡಿಯುತ್ತಾರೆ. ವಾದಿ ಮತ್ತು ನಮ್ಮ ನಿವೇಶನ ಪೊಲೀಸ್ ನಿಂಗಪ್ಪನವರ ಬಡಾವಣೆಯಲ್ಲಿದೆ ಎಂದರೆ ಸರಿ. ದಾವ ಸ್ವತ್ತಿನ ಅಸಸ್ ಮೆಂಟ್ ಸಂಖ್ಯೆ *4951* ಎಂದರೆ ನನಗೆ ಗೊತ್ತಿಲ್ಲ. ನಾವು ಸ್ವತ್ತನ್ನು ರಾಚಯ್ಯನವರಿಂದ ಖರೀದಿಸಿರುತ್ತೇವೆ. ನಮ್ಮ ಸ್ವತ್ತಿನ ಸಂಖ್ಯೆ *66* ಆಗಿರುತ್ತದೆ. ನಮ್ಮ ಸ್ವತ್ತಿನ ಅಸಸ್ ಮೆಂಟ್ ಸಂಖ್ಯೆ *4952* ಎಂದರೆ ಸರಿ. ದಾವ ಸ್ವತ್ತಿನ ಪೂರ್ವಕ್ಕೆ ನಮ್ಮ ನಿವೇಶನ ಸಂಖ್ಯೆ *66* ಇದೆ ಎಂದರೆ ಸರಿ. ನಾವು ಮನೆ ಕಟ್ಟಿ ಸುಮಾರು *10* ವರ್ಷಕ್ಕಿಂತಲೂ ಹೆಚ್ಚಾಗಿದೆ. ಸದರಿ ಮನೆ ಕಟ್ಟಲು ನಿವೇಶನ ಅಳತೆ ಮಾಡಿಸಿ ಪರವಾನಿಗೆ ಪಡೆದಿರುತ್ತೇವೆ. ಸದರಿ ಪರವಾನಗಿ ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇವೆ. ಮುನ್ಸಿಪಾಲಿಟಿಯಿಂದ ಮನೆ ಕಟ್ಟಲು ಪರವಾನಗಿಯನ್ನು *1993* ರಲ್ಲಿ ರಾಚಯ್ಯ ಪಡೆದಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ನಾನು ಪಡೆದಿದ್ದೆನು ಎಂದು ನುಡಿಯುತ್ತಾರೆ. ನಾನು ಪಡೆದ ಪರವಾನಗಿ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಮನೆ ನಕ್ಷೆಯನ್ನು *2010* ರಲ್ಲಿ ತಯಾರಿಸಿರುತ್ತೇವೆಂದರೆ ಇರಬಹುದು ನನಗೆ ಗೊತ್ತಿಲ್ಲ. ಸದರಿ ಬಡಾವಣೆಯಲ್ಲಿನ ನಿವೇಶನಗಳ ಅಳತೆ *20* ಇಂಟು *40* ಎಂದರೆ ಸರಿ. ವಾದಿಯು ಸದರಿ ಅಳತೆಯ ಎರಡು ನಿವೇಶನ ಖರೀದಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ.

ನಮ್ಮ ನಿವೇಶನದ ಪಶ್ಚಿಮಕ್ಕೆ ನಿವೇಶನ ಸಂಖ್ಯೆ *65* ಇದೆ ಎಂದರೆ ಸರಿ. ನಂತರ *64* ಇರುತ್ತದೆ ಎಂದರೆ ಸರಿ. *2009* ರಲ್ಲಿ ಮುನ್ಸಿಪಾಲಿಟಿಯವರು ನಿವೇಶನದ ಅಳತೆ ಮಾಡಿಸಲು ನೋಟೀಸನ್ನು ಪೊಲೀಸ್ ನಿಂಗಪ್ಪನವರಿಗೆ ನೀಡಿದ್ದರು ಎಂದರೆ ಸರಿ. ನಿವೇಶನ ಸಂಖ್ಯೆ *66* ಕ್ಕೆ ನಾವು ಬ್ಯಾಂಕಿನಲ್ಲಿ ಸಾಲ ಪಡೆದಿರುತ್ತೇವೆ ಎಂದರೆ ಸರಿ. *2012* ರಲ್ಲಿ ಮನೆ ಕಟ್ಟಿದ್ದೇವೆ ಎಂದರೆ ಸಾಕ್ಷಿಯು *10* ವರ್ಷದ ಹಿಂದೆ ಕಟ್ಟಿದ್ದೇವೆ ಎಂದು ನುಡಿಯುತ್ತಾರೆ. ವಾದಿಯು ದಾವ ಸ್ವತ್ತನ್ನು ಯಾವಾಗ ಖರೀದಿಸಿದರು ಎಂದು ನನಗೆ ಗೊತ್ತಿಲ್ಲ. ನಾವು ಮನೆ ಕಟ್ಟುವಾಗ ವಾದಿಯು ಅದು

ನಮ್ಮ  ನಿವೇಶನ ಮನೆ ಕಟ್ಟಬೇಡಿ ಎಂದು ತಿಳಿಸಿರುತ್ತಾರೆಂದರೆ ಸರಿಯಲ್ಲ. ನಾವು ಮನೆ ಕಟ್ಟುವಾಗ ಪಂಚಾಯಿತಿ ಮಾಡಲಾಯಿತು ಎಂದರೆ ಸರಿಯಲ್ಲ. ಆಗ ನಾವು ವಾದಿಯರ ಮೇಲೆ ಪೊಲೀಸ್ ದೂರು ನೀಡಿದೆವು ಎಂದರೆ ಸರಿಯಲ್ಲ. ನಂತರ ವಾದಿಯು ನಿವೇಶನದ ಬಳಿ ಬಂದು ಹೋಗುತ್ತಿದ್ದು, ಅಳತೆ ಮಾಡಿಸಿಕೊಂಡ ನಂತರ ನಮಗೆ ಮನೆ ಕಟ್ಟಲು ತಿಳಿಸಿದರು. ತಮ್ಮ ನಿವೇಶನಕ್ಕೆ ತಂತಿ ಬೇಲಿ ಹಾಕಿಕೊಂಡರು. ನಂತರ ನಾವು ಮನೆ ಕಟ್ಟುವಾಗ ಕಿಟಕಿ ಬಿಡಬೇಡಿ, ಜಾಗ ಬಿಟ್ಟಿಲ್ಲ ಎಂದು ತಕರಾರು ಮಾಡಿರುತ್ತಾರೆ. ನಾವು ಮನೆಯನ್ನು ನಿವೇಶನ ಸಂಖ್ಯೆ *65* ರಲ್ಲಿ ಕಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಮನಯ ಪಶ್ಚಿಮಕ್ಕೆ ನಿವೇಶನ ಸಂಖ್ಯೆ *64* ಇದೆ ಎಂದರೆ ಸಾಕ್ಷಿಯು *64* ಮತ್ತು *65* ಇದೆ ಎಂದು ನುಡಿಯುತ್ತಾರೆ. ಸದರಿ ಎರಡು ನಿವೇಶನಗಳು ವಾದಿಗೆ ಸೇರಿದ್ದು ಎಂದರೆ ನನಗೆ ಗೊತ್ತಿಲ್ಲ. ನಿವೇಶನ ಸಂಖ್ಯೆ *64* ಮತ್ತು *65* ನ್ನು ವಾದಿಯು ಒಟ್ಟಿಗೆ ಖರೀದಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನಮ್ಮ ಮನೆಯ ಪೂರ್ವಕ್ಕೆ ನಿವೇಶನ ಸಂಖ್ಯೆ *67* ಇರುತ್ತದೆ. ನಮ್ಮ ಮನೆಯ ಪೂರ್ವಕ್ಕೆ ನಿವೇಶನ ಸಂಖ್ಯೆ *66* ಇದೆ ಎಂದರೆ ಸಾಕ್ಷಿಯು *67* ಎಂದು ನುಡಿಯುತ್ತಾರೆ. ನಿಪಿ-*13* ಪೊಲೀಸ್ ನಿಂಗಪ್ಪ ಬಡಾವಣೆಯ ನಕ್ಷೆ ಎಂದರೆ  ಸರಿ. ನಿವೇಶನ ಸಂಖ್ಯೆ *64* ರಿಂದ *67* ಒಂದೇ ಸಾಲಿನಲ್ಲಿ ಇವೆ ಎಂದರೆ ಸಾಕ್ಷಿಯು ನಾನು ಓದಿಲ್ಲ ಎಂದು ನುಡಿಯುತ್ತಾರೆ.

ನಾವು ಮನೆಯನ್ನು ನಿವೇಶನ ಸಂಖ್ಯೆ *65* ರಲ್ಲಿ ಕಟ್ಟುತ್ತಿದ್ದೇವೆ ಎಂದು ಮೊದಲೆ ತಿಳಿದಿತ್ತು ಎಂದರೆ ಸರಿಯಲ್ಲ. ನಾನು ಅಕ್ರಮ ಲಾಭ ಪಡೆಯಲು ನಿವೇಶನ ಸಂಖ್ಯೆ *66* ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಮುನ್ಸಿಪಾಲ್ ದಾಖಲೆಗಳಲ್ಲಿ ನನ್ನ ಹೆಸರಿಗೆ ನಿವೇಶನ ಸಂಖ್ಯೆ *66* ಎಂದು ನಮೂದು ಇದೆ ಎಂದರೆ ಸರಿ. ನಿವೇಶನ ಸಂಖ್ಯೆ *66* ಕ್ಕೆ ಸಾಲ ಪಡೆದು *65* ರಲ್ಲಿ ಮನೆ ಕಟ್ಟಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮನೆಯ ದಕ್ಷಿಣ ದಿಕ್ಕಿಗೆ ದೊಡ್ಡಯ್ಯ ಮಾಸ್ಟ್ರು ಇದ್ದು, ಆದರೆ ನಿವೇಶನ ಸಂಖ್ಯೆ ನನಗೆ ಗೊತ್ತಿಲ್ಲ. ಪ್ರತಿ  ಶುಕ್ರವಾರ  ನಾನು ಸಂತೆ ವ್ಯಾಪಾರ ಮಾಡುತ್ತೇನೆ ಎಂದರೆ ಸರಿ.   ನನಗೆ  ಸಂಖ್ಯೆಗಳನ್ನು  ಗುರುತಿಸಲಾಗುವುದಿಲ್ಲ.  ನನಗೆ ಎಲ್ಲಾ ತಿಳಿದರೂ ಸಹ ಇಲ್ಲ ಎಂದು ವಾದಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ತಕರಾರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ನಾನು ಸತ್ಯವನ್ನು ಮರೆಮಾಚಲು ನಮಗೆ ನೀಡಿದ

ಪರವಾನಗಿ ಪ್ರತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ವಾದಿಯ ಸ್ವತ್ತಿನಲ್ಲಿ ದುರುದ್ದೇಶದಿಂದ ಮನೆ ಕಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಿವೇಶನವನ್ನು ನನ್ನ ಮಗ ನನ್ನ ಹೆಸರಿಗೆ ಖರೀದಿಸಿದ್ದು ಆದರೆ ಎಷ್ಟು ಹಣಕ್ಕೆಂದು ನನಗೆ ಗೊತ್ತಿಲ್ಲ.

ಮರು ವಿಚಾರಣೆಃ ಇಲ್ಲ

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

*ಓ. ಕೇ. ಸ. ಇ. ಎ. ಒ.*

Sd/-

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

***ಪ್ರ.ದ.ನ್ಯಾ.ದಂ.ರವರು,ತರೀಕೆರೆ.***